# ತಾರಾಲೋಕದಲ್ಲಿ ವಿಹಾರ!



ಚಿದಾನಂದ ಸಾಲಿ



1

ಆಗಷ್ಟೇ ‘ಎಲೆಯುದುರೂ ಕಾಲ’ ಎಂಬ ತೆಲುಗಿನಿಂದ ಅನುವಾದಿತವಾದ ನನ್ನ ಮೊದಲ ಕೃತಿಯನ್ನು ರವಿ ಬೆಳಗೆರೆಯವರು ತಮ್ಮ ‘ಭಾವನಾ ಪ್ರಕಾಶನ’ದಿಂದ ಪ್ರಕಟಿಸಿದ್ದರು. ಆಗ್ಗೆ ಅದೊಂದೇ ನನ್ನ ಪ್ರಕಟಿತ ಕೃತಿ. ಅದೂ ಅನುವಾದ! ಸ್ವಂತದ ಮೊದಲ ಕೃತಿಯಾದ ‘ಮೌನ’ ಎಂಬ ಗಜಲ್ ಸಂಕಲನವು ಎರಡನೇ ಕೃತಿಯಾಗಿ ಅಭಿನವ ಪ್ರಕಾಶನದಿಂದ ಪ್ರಕಟಣೆಗೆ ಸಿದ್ಧವಾಗಿತ್ತು. ಕನ್ನಡದಲ್ಲಿ ಗಜಲ್ ಪ್ರಕಾರಕ್ಕೆ ಶ್ರೀಕಾರ ಹಾಕಿದ ಡಾ.ಶಾಂತರಸರೇ ಮುನ್ನುಡಿ ಬರೆದುಕೊಟ್ಟಾಗಿತ್ತು.

ಬೆನ್ನುಡಿಗಾಗಿ ಪಂ.ರಾಜೀವ ತಾರಾನಾಥರನ್ನು ಕೇಳಬೇಕೆಂಬ ಆಲೋಚನೆಯನ್ನು ತುಂಬಿದವರ್‍ಯಾರೋ ಸರಿಯಾಗಿ ನೆನಪಾಗುತ್ತಿಲ್ಲ. ಬಿಗ್ಗಂಬಿಗಿ ವ್ಯಕ್ತಿತ್ವದ ಅವರನ್ನು ಕೇಳುವ